# ವಿವೇಕಪ್ರಭ

## ಎರಡು ಮನೋಭಾವಗಳು

**ಮಾನವ**ರಲ್ಲಿ ಮುಖ್ಯವಾಗಿ ಎರಡು ಮನೋಭಾವಗಳನ್ನು ಕಾಣಬಹುದು: **ವಿಶ್ಲೇಷಣಾತ್ಮಕ ಮತ್ತು ಸಮುಚ್ಚಯಾತ್ಮಕ.** ವಿಶ್ಲೇಷಣಾತ್ಮಕ ಮನೋಭಾವದವರು ಎಲ್ಲವನ್ನೂ ವಿಶ್ಲೇಷಿಸುತ್ತ, ವಿಭಾಗಿಸುತ್ತ ಹೋಗುತ್ತಾರೆ. ವಸ್ತು-ವಸ್ತುಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳ ಆಧಾರದ ಮೇಲೆ ಅವುಗಳನ್ನು ವಿವಿಧ ವರ್ಗಗಳಾಗಿ ವಿಭಾಗಿಸುತ್ತಾರೆ. ಪ್ರತಿಯೊಂದು ವಸ್ತುವಿನಲ್ಲಿರುವ ವಿಶೇಷ ಲಕ್ಷಣಗಳನ್ನು ಕಂಡುಹಿಡಿದು ಅದನ್ನು ಬೇರೆ ವಸ್ತುಗಳಿಂದ ಪ್ರತ್ಯೇಕಿಸುತ್ತಾರೆ. ಪ್ರತಿಯೊಂದು ವಸ್ತುವನ್ನೂ ವಿಶ್ಲೇಷಿಸಿ, ಅವುಗಳ ಒಳಹೊಕ್ಕು ಅವುಗಳ ಮೂಲ ಘಟಕಗಳನ್ನು ಕಂಡುಹಿಡಿಯುತ್ತಾರೆ. ಅವರ ಮನಸ್ಸು ಇನ್ನೂ ಮುಂದೆ ಹೋಗಿ ಪರಮಾಣುವನ್ನೂ ವಿಭಜಿಸಿ ಅದರ ರಹಸ್ಯವನ್ನು ಭೇದಿಸುತ್ತ ಸೂಕ್ಷ್ಮಾತಿ ಸೂಕ್ಷ್ಮವಾದ ಹೊಸ ಜಗತ್ತನ್ನೇ ನಮ್ಮ ಮುಂದೆ ತೆರೆದಿಡುತ್ತದೆ. ಹೊರಜಗತ್ತಿನಲ್ಲಿಯೂ ತಾರಾನೀಹಾರಿಕೆಗಳ ರಹಸ್ಯವನ್ನು ಭೇದಿಸುತ್ತ ಕಲ್ಪನಾತೀತವಾದ ಅಪಾರ ಜಗತ್ತಿನ ಚಿತ್ರವನ್ನು ನಮಗೆ ನೀಡುತ್ತದೆ. ಮಾನವ ಮತ್ತು ಪ್ರಾಣಿಗಳ ದೇಹದ ಅಂಗಾಂಗಗಳನ್ನೂ ಅವುಗಳ ಕ್ರಿಯೆಗಳನ್ನೂ ವಿಭಾಗಿಸಿ ಈ ಅದ್ಭುತ ಯಂತ್ರದ ಕಾರ್ಯವೈಖರಿಯ ಆಶ್ಚರ್ಯಕರ ವಿವರಣೆಯನ್ನು ನಮಗೆ ನೀಡುತ್ತದೆ. ಈ ವಿಶ್ಲೇಷಣಾತ್ಮಕ ಮನೋಭಾವದಿಂದ ನಮಗೆ ವಿವಿಧ ಭೌತಿಕ ವಿಜ್ಞಾನಗಳು ದೊರೆತಿವೆ.

ಇನ್ನೊಂದು **ಸಮುಚ್ಚಯಾತ್ಮಕ.** ಈ ಮನೋಭಾವದವರು ವೈವಿಧ್ಯವನ್ನು ನೋಡುವುದಿಲ್ಲ, ಅದರ ಹಿಂದಿರುವ ಏಕತೆಯನ್ನು ಅರಸುತ್ತಾರೆ. ಉಪನಿಷತ್ತಿನಲ್ಲಿ ಶಿಷ್ಯನೊಬ್ಬನು, **ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ** (ಮುಂಡಕ, ೧.೧.೩) — 'ಯಾವ ಒಂದನ್ನು ತಿಳಿಯುವುದರಿಂದ ಎಲ್ಲವನ್ನೂ ತಿಳಿದಂತಾಗುತ್ತದೆ?'—ಎಂದು ಗುರುವನ್ನು ಪ್ರಶ್ನಿಸುತ್ತಾನೆ. ಇದು ಸಮುಚ್ಚಯ ಭಾವವನ್ನು ಸೂಚಿಸುತ್ತದೆ. ಸಮುಚ್ಚಯಾತ್ಮಕ ಮನಸ್ಸು ಎಲ್ಲವನ್ನೂ ಒಂದಾಗಿ ನೋಡಲು ಬಯಸುತ್ತದೆ, ವಿವಿಧತೆಯನ್ನು ಒಂದು ಪೂರ್ಣತೆಯ ಹಿನ್ನೆಲೆಯಲ್ಲಿ ನೋಡಬಯಸುತ್ತದೆ. ಅದರ ತೀಕ್ಷ್ಣ ಸಮತ್ವ ದೃಷ್ಟಿಯ ಮುಂದೆ ವೈವಿಧ್ಯವೆಲ್ಲ ಕರಗಿ ಏಕತೆಯಲ್ಲಿ ಲಯ ಹೊಂದುತ್ತದೆ—ವಿವಿಧತೆಯ ನದಿಗಳೆಲ್ಲ ಏಕತೆಯ ಸಮುದ್ರದಲ್ಲಿ ಒಂದಾಗುತ್ತವೆ. ಎಲ್ಲ ದ್ವಂದ್ವಗಳನ್ನೂ ವಿರೋಧಗಳನ್ನೂ ಅನಂತ ಭೇದರಾಶಿಗಳನ್ನೂ ಈ ಸಮುಚ್ಚಯ ದೃಷ್ಟಿಯು ಏಕೀಕರಿಸುತ್ತದೆ. ಛಾಂದೋಗ್ಯೋಪನಿಷತ್ತಿನಲ್ಲಿ ಈ ಭಾವ ಬಹಳ ಸುಂದರವಾಗಿ ವ್ಯಕ್ತವಾಗಿದೆ:

**ಯಥಾ ಸೌಮ್ಯೈಕೇನ ಮೃತ್ಪಿಂಡೇನ**
**ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್ ।**
**ವಾಚಾರಂಭಣಂ ವಿಕಾರೋ ನಾಮಧೇಯಂ,**
**ಮೃತ್ತಿಕೇತ್ಯೇವ ಸತ್ಯಮ್ ॥** (ಛಾಂದೋಗ್ಯ, ೬.೧.೪)

'ಸೌಮ್ಯ, ಒಂದು ಮಣ್ಣುಮುದ್ದೆಯನ್ನು ತಿಳಿದುಕೊಂಡರೆ ಮಣ್ಣಿನಿಂದ ತಯಾರಿಸುವುದೆಲ್ಲವೂ ತಿಳಿಯಲ್ಪಡುತ್ತದೆ. ಏಕೆಂದರೆ ವಸ್ತುವಿನ ವಿಕಾರಗಳೆಲ್ಲವೂ ಕೇವಲ ಹೆಸರು ಅಷ್ಟೇ, ಮಣ್ಣು ಮಾತ್ರ ಸತ್ಯ.'

ಈ ಎರಡೂ ಮನೋಭಾವಗಳು ಪರಸ್ಪರ ವಿರೋಧವಾಗಿ ಕಂಡರೂ ಪರಸ್ಪರ ಪೂರಕಗಳು, ಎರಡೂ ಜ್ಞಾನಾರ್ಜನೆಯ ವಿವಿಧ ಮಾರ್ಗಗಳು. ಒಂದು ಮಣಿಗಳನ್ನು ನೋಡಬಯಸುತ್ತದೆ, ಮತ್ತೊಂದು ಮಣಿಗಳನ್ನು ಕೂಡಿಸುವ ಸೂತ್ರವನ್ನು ಕಾಣಬಯಸುತ್ತದೆ. ಒಂದು ಮಾವಿನ ತೋಪಿನಲ್ಲಿ ಕೊಂಬೆ ಮತ್ತು ಎಲೆಗಳನ್ನು ಎಣಿಸಬಯಸುತ್ತದೆ, ಮತ್ತೊಂದು ಮಾವಿನ ಹಣ್ಣನ್ನು ತಿನ್ನಲು ಹವಣಿಸುತ್ತದೆ. ಒಂದು ಅಭ್ಯುದಯಕಾರಿ, ಇನ್ನೊಂದು ನಿಃಶ್ರೇಯಸಕಾರಿ. ಸ್ವಾಮಿ ವಿವೇಕಾನಂದರದು ಇವೆರಡರ ಸಮನ್ವಯ ದೃಷ್ಟಿ.

## ವಿವೇಕಬುದ್ಧಿ

ವಿಶ್ಲೇಷಣಾತ್ಮಕ ಮನೋಭಾವವನ್ನು ವಿವೇಕಬುದ್ಧಿ ಎಂದು ಕರೆಯಬಹುದು. ವಿವೇಕವೆಂದರೆ ವಿಭಾಗಿಸುವುದು ಎಂದರ್ಥ. ಸತ್ಯಾಸತ್ಯಗಳನ್ನು, ನಿತ್ಯಾನಿತ್ಯಗಳನ್ನು, ಸುಖದುಃಖಗಳನ್ನು, ಒಳಿತುಕೆಡುಕುಗಳನ್ನು, ಗುಣದೋಷಗಳನ್ನು ಕಾರ್ಯಾಕಾರ್ಯಗಳನ್ನು ವಿಭಾಗಿಸಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯವೇ ವಿವೇಕ. ನಮ್ಮ ನಿತ್ಯಜೀವನದಲ್ಲಿ ಈ ವಿವೇಕಬುದ್ಧಿ ಅತ್ಯಂತ ಮುಖ್ಯ ಪಾತ್ರವನ್ನು ವಹಿಸುತ್ತದೆ. ನಾವು ಸಮಾಜದಲ್ಲಿರುವಾಗ ಅನೇಕ ಸತ್ ಅಥವಾ ದುಷ್ ಪ್ರಭಾವಗಳಿಗೆ ಒಳಗಾಗುತ್ತೇವೆ. ವಿಶೇಷವಾಗಿ ಆಧುನಿಕ ಕಾಲದಲ್ಲಿ ಇಂತಹ ಪ್ರಭಾವಗಳು ಅತ್ಯಧಿಕ. ವಿವಿಧ ಪತ್ರಿಕೆಗಳು, ಜಾಹಿರಾತುಗಳು, ಟಿ.ವಿ., ಇಂಟರ್‌ನೆಟ್ ಮುಂತಾದ ಮಾಧ್ಯಮಗಳು ನಮ್ಮ ಮೇಲೆ ಅನೇಕ ಬಗೆಯ ಪ್ರಭಾವಗಳನ್ನು ನಮ್ಮ ಅರಿವಿಲ್ಲದಂತೆಯೇ ಬೀರುತ್ತಿರುತ್ತವೆ. ಇಲ್ಲಿ ನಾವು ಹಂಸಕ್ಷೀರ ನ್ಯಾಯವನ್ನು ಉಪಯೋಗಿಸಿ ದುಷ್ಟಭಾವಗಳಿಗೆ ಒಳಗಾಗದೆ ಸತ್ಯಭಾವಗಳಿಂದ ಪ್ರಯೋಜನವನ್ನು ಪಡೆಯಬೇಕು. ಇಲ್ಲದಿದ್ದರೆ ನಮ್ಮ ಜೀವನ ಗಾಳಿಯಲ್ಲಿ ತೂರಿಬಿಟ್ಟ ತರಗೆಲೆಯಂತಾಗಿ, ಯಾವ ಒಂದು ನಿರ್ದಿಷ್ಟ ನೆಲೆಯೂ ಇಲ್ಲದೆ ನಿಜವಾದ ಅರ್ಥವನ್ನು ಕಳೆದುಕೊಳ್ಳುತ್ತದೆ. ಇಂದಿನ ಯುವಕರ ಜೀವನದಲ್ಲಿ ಈ ಅರ್ಥಹೀನತೆಯನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಜೀವನ ಅರ್ಥಹೀನವಾದಾಗ ಎಲ್ಲ ಉನ್ನತ ಮೌಲ್ಯಗಳನ್ನು ಜನರು ಕಡೆಗಣಿಸಿ ಸ್ವೇಚ್ಛಾಚಾರ ಜೀವನಕ್ಕೆ ಇಳಿಯುತ್ತಾರೆ. ಆದ್ದರಿಂದ ಆಧುನಿಕ ಜೀವನದಲ್ಲಿ ವಿವೇಕಬುದ್ಧಿ ಹೆಚ್ಚು ಜಾಗ್ರತವಾಗಿರಬೇಕಾಗುತ್ತದೆ.

## ಆತ್ಮವಿಶ್ಲೇಷಣೆ

ಇನ್ನೊಂದು ದೃಷ್ಟಿಯಿಂದ ಇದನ್ನು ಆತ್ಮವಿಶ್ಲೇಷಣೆ (ಮನಶ್ಶಾಸ್ತ್ರಜ್ಞರ Psychoanalysis ಅಲ್ಲ) ಎಂದು ಕರೆಯಬಹುದು. ನಮ್ಮ ಆಲೋಚನೆ ಮಾತು ಕೃತಿಗಳ ಹಿಂದೆ ಅನೇಕ ಸದುದ್ದೇಶ

ದುರುದ್ದೇಶಗಳು ಅಡಗಿರುತ್ತವೆ, ಅನೇಕ ಆಸೆ ಆಕಾಂಕ್ಷೆಗಳು ಹುದುಗಿಕೊಂಡಿರುತ್ತವೆ. ಇವುಗಳನ್ನು ನಿರ್ಲಿಪ್ತಭಾವದಿಂದ ವಿಶ್ಲೇಷಿಸಿ ಇವುಗಳ ನಿಜವಾದ ಸ್ವರೂಪವನ್ನು ಕಂಡುಹಿಡಿಯುವುದು, ಇವುಗಳ ಹೊಂದಿರುವ ಮೂಲಸೂತ್ರವನ್ನು ಪತ್ತೆಹಚ್ಚುವುದು—**ಇದು ವಿವೇಕದ ಕಾರ್ಯ.**

ಸಾಮಾನ್ಯವಾಗಿ ನಮ್ಮ ಮನಸ್ಸಿನಲ್ಲಿ ಏಳುವ ನಾನಾ ವಿಷಯಗಳಿಗೆ ಸಂಬಂಧಿಸಿದ ಆಲೋಚನೆಗಳನ್ನು ಜ್ಞಾನವೃತ್ತಿ (cognitive mind) ಎಂದು ಕರೆಯುತ್ತಾರೆ. ನಮ್ಮ ಮನಸ್ಸಿನಲ್ಲಿ ಏಳುವ ರಾಗ, ದ್ವೇಷ, ಕರುಣೆ, ಸುಖ, ದುಃಖ, ಮುಂತಾದ ಭಾವಗಳನ್ನು ಭಾವನಾವೃತ್ತಿ (affective mind) ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಈ ಎರಡೂ ಬಗೆಯ ವೃತ್ತಿಗಳು ಬೆರೆತುಕೊಂಡಿರುತ್ತವೆ. ನಾವು ಯಾವುದೊ ವಸ್ತುವಿನ ಅಥವಾ ವ್ಯಕ್ತಿಯ ಬಗ್ಗೆ ಆಲೋಚಿಸುವಾಗ ಅದರೊಡನೆ ಯಾವುದಾದರೊಂದು ಬಗೆಯ ಭಾವೋದ್ವೇಗವು ತೀವ್ರ ಅಥವಾ ಮಂದಪ್ರಮಾಣದಲ್ಲಿ ಬೆರೆತಿರುತ್ತದೆ. ಉದಾಹರಣೆಗೆ, ಒಂದು ವ್ಯಕ್ತಿಯ ಬಗ್ಗೆ ಆಲೋಚಿಸುವಾಗ ರಾಗ, ದ್ವೇಷ ಅಥವಾ ಭಯ ಅದರೊಡನೆ ಸೇರಿಕೊಂಡಿರಬಹುದು. ಹಾಗೆಯೇ ವಸ್ತುವಿನ ಬಗ್ಗೆ ಆಲೋಚಿಸುವಾಗ ಇಷ್ಟಾನಿಷ್ಟಗಳು ಬೆರೆತಿರಬಹುದು. ಆಗ ವ್ಯಕ್ತಿಯನ್ನಾಗಲಿ, ವಸ್ತುವನ್ನಾಗಲಿ ವಾಸ್ತವ ದೃಷ್ಟಿಯಿಂದ ನೋಡಲಾಗುವುದಿಲ್ಲ. ಭಾವಪ್ರವಣತೆಗೆ ಒಳಗಾಗದೆ ಒಂದು ವ್ಯಕ್ತಿ, ವಸ್ತು ಅಥವಾ ಘಟನೆಯನ್ನು ವಾಸ್ತವ ದೃಷ್ಟಿಯಿಂದ ಅಳೆಯುವ ಸಾಮರ್ಥ್ಯ ಅತ್ಯಂತ ಅಪರೂಪವಾದುದು. ನಮ್ಮ ಆಲೋಚನೆಗಳನ್ನು ವಿಶ್ಲೇಷಿಸಿ, ಅವುಗಳ ಮೇಲೆ ಭಾವವೃತ್ತಿಗಳು ಹೇಗೆ ಪ್ರಭಾವ ಬೀರುತ್ತವೆ ಎಂದು ನೋಡುವುದೇ **ವಿವೇಕ.**

ನಮ್ಮ ಆಲೋಚನೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ನೋಡಿದಾಗ ನಮ್ಮೊಳಗಿರುವ ಸಂಸ್ಕಾರಗಳ ಸ್ವರೂಪವನ್ನು ಅರಿಯಬಹುದು. ನಾವು ನಿಜವಾಗಿಯೂ ಏನನ್ನು ಬಯಸುತ್ತೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ನಮ್ಮ ಆಲೋಚನೆಗಳು ಅನೇಕವೇಳೆ ಹಗಲುಗನಸು(wishful thinking)ಗಳಾಗಿರುತ್ತವೆ, ಪೂರ್ತಿಯಾಗದ, ಪೂರ್ತಿಯಾಗಲಾರದ ಆಸೆಗಳ ಅಭಿವ್ಯಕ್ತಿಗಳಾಗಿರುತ್ತವೆ. ತೀವ್ರವಾಗಿ ಕೀರ್ತಿಯನ್ನು ಬಯಸುವವನು ತನ್ನ ಯಾವುದೊ ಕಾರ್ಯಕ್ಕಾಗಿ ಇತರರು ತನ್ನನ್ನು ಹೊಗಳುತ್ತಿರುವಂತೆಯೂ, ತನ್ನನ್ನು ಸನ್ಮಾನಿಸುತ್ತಿರುವಂತೆಯೂ ಕಲ್ಪಿಸಿಕೊಳ್ಳಬಹುದು. ನಾವು ದ್ವೇಷಿಸುವ ವ್ಯಕ್ತಿಗಳೊಡನೆ

ನಮ್ಮ ಆಲೋಚನೆಗಳನ್ನು ವಿಶ್ಲೇಷಿಸಿ, ಅವುಗಳ ಮೇಲೆ ಭಾವವೃತ್ತಿಗಳು ಹೇಗೆ ಪ್ರಭಾವ ಬೀರುತ್ತವೆ ಎಂದು ನೋಡುವುದೇ ವಿವೇಕ.

ಮನಸ್ಸಿನೊಳಗೇ ಜಗಳವಾಡುವ ಪ್ರಸಂಗಗಳುಂಟು. ಇಂತಹ ಹಗಲುಗನಸುಗಳು ನಮ್ಮೊಳಗಡಗಿರುವ ಆಸೆಗಳನ್ನೂ ರಾಗದ್ವೇಷಾದಿ ಕ್ಲೇಶಸಂಸ್ಕಾರಗಳನ್ನೂ ಪ್ರತಿಬಿಂಬಿಸುತ್ತವೆ. ತೀಕ್ಷ್ಣ ವಿಶ್ಲೇಷಣೆಯ ಮೂಲಕ ನಾವು ಇವುಗಳನ್ನು ಕ್ರಮೇಣ ಗೆಲ್ಲಬಹುದು.

## ಇಚ್ಛಾಶಕ್ತಿ

ನಮ್ಮ ಇಚ್ಛೆ ಮತ್ತು ಆಸೆಗಳು ಸಾಮಾನ್ಯವಾಗಿ ಬೆರೆತುಕೊಂಡಿರುತ್ತವೆ—ನಮಗೊಂದು ಪ್ರತ್ಯೇಕ ಇಚ್ಛೆ ಇದೆ ಎಂಬುದೇ ಅರಿವಾಗದ ಮಟ್ಟಿಗೆ. ಅನೇಕ ಮನಶ್ಶಾಸ್ತ್ರಜ್ಞರು **ಇಚ್ಛೆ** ಮತ್ತು **ಆಸೆ** ಈ ಶಬ್ದಗಳನ್ನು ಒಂದೇ ಅರ್ಥದಲ್ಲಿ ಬಳಸುತ್ತಾರೆ. ಒಂದು ಆಧ್ಯಾತ್ಮಿಕ ಆದರ್ಶವನ್ನಿಟ್ಟುಕೊಂಡು ನಮ್ಮ ಆಸೆಗಳನ್ನು ನಿಗ್ರಹಿಸಲು ಪ್ರಯತ್ನಿಸಿದಾಗಲೇ ನಮಗೆ ಇಚ್ಛಾಶಕ್ತಿಯ ಅರಿವಾಗುವುದು. ಸಾಮಾನ್ಯವಾಗಿ ಒಂದು ಆಸೆ ಉದಿಸಿದ ಕೂಡಲೆ ಇಚ್ಛೆ ಅದನ್ನು ಅನುಮೋದಿಸುತ್ತದೆ. ಹೀಗೆ ಆಸೆ ಮತ್ತು ಇಚ್ಛೆಗಳು ಕೂಡಿದಾಗ ಸಂಕಲ್ಪವಾಗುತ್ತದೆ. ಅನಂತರ ಕ್ರಿಯೆ ಅದನ್ನು ಅನುಸರಿಸುತ್ತದೆ. ಇಚ್ಛೆಯನ್ನು ಆಸೆಗಳ ಹಿಡಿತದಿಂದ ಬಿಡಿಸುವುದು ಮುಖ್ಯ. ಆಸೆಗಳಿಂದ ಮುಕ್ತವಾದ ಇಚ್ಛೆ ಏಕಮುಖವಾಗಿ ಆದರ್ಶದ ಕಡೆ ಹರಿಯುತ್ತದೆ. ನದಿಗೆ ಅಣೆಕಟ್ಟನ್ನು ಹಾಕಿ ಅದರ ನೀರನ್ನು ಕಾಲುವೆಗಳ ಮೂಲಕ ನೀರಾವರಿಗೆ ತೆಗೆದುಕೊಂಡು ಹೋಗುತ್ತಾರೆ. ಅದು ಸಮುದ್ರವನ್ನು ಸೇರುವಹೊತ್ತಿಗೆ ಸ್ವಲ್ಪವೇ ನೀರು ಉಳಿದಿರುತ್ತದೆ. ಹಾಗೆಯೇ ಇಚ್ಛಾಶಕ್ತಿಯನ್ನು ಆಸೆಗಳೆಂಬ ಕಾಲುವೆಗಳಲ್ಲಿ ಹರಿಸುವುದರಿಂದ ಭಗವದಾದರ್ಶದೆಡೆಗೆ ಹೋಗುವುದಕ್ಕೆ ಸ್ವಲ್ಪವೇ ಇಚ್ಛೆ ಉಳಿದಿರುತ್ತದೆ. ಶ್ರೀಕೃಷ್ಣನು ಗೀತೆಯಲ್ಲಿ ಹೀಗೆ ಹೇಳುತ್ತಾನೆ:

**ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ |**
**ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್ ||**

'ಶಿಸ್ತುಗೊಳಿಸಲ್ಪಟ್ಟ, ಪರಿಪಕ್ವವಾದ ಬುದ್ಧಿ ಅಥವಾ ಇಚ್ಛೆ ಏಕಮುಖವಾಗಿರುತ್ತದೆ. ಅಶಿಸ್ತಿನ ವ್ಯಕ್ತಿಗಳಲ್ಲಿ ಬುದ್ಧಿಯು ಬಹುಶಾಖೆಯುಳ್ಳದ್ದೂ ಅಸಂಖ್ಯವೂ ಆಗಿರುತ್ತದೆ.' ಆಸೆಗಳು ಬಹುವಾದುದರಿಂದ ಇಚ್ಛೆಯೂ ಬಹುವಾಗುತ್ತದೆ. ಆಸೆಗಳ ಮೂಲಕ ಇಚ್ಛೆಯು ಕವಲೊಡೆಯುವುದರಿಂದ ಅದು ಶಕ್ತಿಗುಂದುತ್ತದೆ. ಆಸೆಗಳಿಂದ ಮುಕ್ತವಾದಷ್ಟೂ ಅದರ ಶಕ್ತಿ ವೃದ್ಧಿಯಾಗುತ್ತದೆ. ಹೀಗೆ ಇಚ್ಛೆಯನ್ನು ಆಸೆಗಳಿಂದ ಪ್ರತ್ಯೇಕಿಸುವುದೂ ವಿವೇಕದ ಕಾರ್ಯ.

## ವಾಕ್ ವಿಶ್ಲೇಷಣೆ

ನಾವು ಆಡುವ ಮಾತನ್ನೂ ವಿಶ್ಲೇಷಿಸಬೇಕಾಗುತ್ತದೆ. ಅನೇಕ ವೇಳೆ ನಾವು ಮಾತನಾಡುವುದು ನಮ್ಮ ಅಹಂಕಾರದ ಪ್ರಕ್ಷೇಪಣೆಗಾಗಿ. ಇದಕ್ಕಾಗಿಯೇ ಅನೇಕರು ಗಟ್ಟಿಯಾಗಿ ಮಾತನಾಡುತ್ತಾರೆ. ಇತರರೊಡನೆ ಸಂಭಾಷಿಸುವಾಗ ಇತರರ ಮಾತಿಗಿಂತ ನಮ್ಮ ಮಾತಿಗೆ ನಾವು ಹೆಚ್ಚು ಪ್ರಾಧಾನ್ಯವನ್ನು ನೀಡುತ್ತೇವೆ. ನಾವು ಕೇಳುವುದಕ್ಕಿಂತ ಹೇಳುವುದರಲ್ಲೇ ಹೆಚ್ಚು ಆಸಕ್ತರು. ಇತರರು ಮಾತನಾಡುವಾಗ ಅವರ ಮಾತನ್ನು ಕಿವಿಗೊಟ್ಟು ಕೇಳುವುದರ ಬದಲು ಅವರು ನಿಲ್ಲಿಸಿದ ಮೇಲೆ ನಾವು ಏನು ಹೇಳುವುದು ಎಂಬುದನ್ನು ಆಲೋಚಿಸುತ್ತಿರುತ್ತೇವೆ. ಕೆಲವೊಮ್ಮೆ ಅವರು ನಿಲ್ಲಿಸುವವರೆಗೆ ತಡೆಯಲಾಗದೆ ಅವರ ಮಾತಿನ ಮಧ್ಯೆ ತೂರಲು ಹವಣಿಸುತ್ತೇವೆ. ಮಾತನಾಡುವ ನಮ್ಮ ಪ್ರವೃತ್ತಿಯನ್ನು ಹೀಗೆ ವಿಶ್ಲೇಷಿಸಿದಾಗ ನಮ್ಮ ಹಲವು ದೋಷಗಳು ಗಮನಕ್ಕೆ ಬರುತ್ತವೆ.

ನಾವಾಡುವ ಎಷ್ಟೋ ಮಾತುಗಳು ಅನವಶ್ಯಕ ಎಂಬುದನ್ನು ತೀಕ್ಷ್ಣವಾದ ವಿಶ್ಲೇಷಣೆ ತಿಳಿಯಪಡಿಸುತ್ತದೆ. 'ಶಬ್ದಗಳ ಮೇಲೆ ಮನುಷ್ಯನಿಗಿರುವ ಪ್ರೀತಿ ಅಜ್ಞಾನದ ಮೊದಲ ಹೆಜ್ಜೆ ಮತ್ತು ಅವನ

ನಿರ್ವಚನಾಪೇಕ್ಷೆ ಎರಡನೆಯ ಹೆಜ್ಜೆ.' ಎಂದು ಲಿನ್ ಯುಟಾಂಗ್ ಹೇಳುತ್ತಾನೆ (*Importance of Living* ಪುಟ. ೪೦೪). ಅಷ್ಟೇ ಅಲ್ಲದೆ ನಮ್ಮ ಮಾತಿನ ಮೂಲಕ ಅನೇಕ ಬಾರಿ—ಉದ್ದೇಶಪೂರ್ವಕವಲ್ಲದಿದ್ದರೂ—ನಾವು ಇತರರನ್ನು ನೋಯಿಸುತ್ತೇವೆ. ಒಂದು ಇಸ್ಲಾಂ ಹೇಳಿಕೆಯ ಪ್ರಕಾರ ನಾವಾಡುವ ಪ್ರತಿಯೊಂದು ಮಾತೂ ಮೂರು ಬಾಗಿಲುಗಳ ಮೂಲಕ ಹರಿದುಬರಬೇಕು. ಮೊದಲನೆಯ ಬಾಗಿಲಿನಲ್ಲಿ ನಿಂತಿರುವ ದ್ವಾರಪಾಲಕನು, 'ಇದು ಸತ್ಯವೇ' ಎಂದು ಕೇಳಬೇಕು. ಎರಡನೆಯ ಬಾಗಿಲಿನಲ್ಲಿರುವವನು 'ಇದು ಅವಶ್ಯಕವೇ' ಎಂದು ಕೇಳಬೇಕು. ಮೂರನೆಯದರಲ್ಲಿರುವವನು 'ಇದು ದಯಾಪೂರ್ಣವೇ' ಎಂದು ಕೇಳಬೇಕು. ನಮ್ಮ ಎಷ್ಟೋ ಮಾತುಗಳು ಪರನಿಂದೆಯಾಗಿರುತ್ತದೆ ಮತ್ತು ಪರನಿಂದೆ ನಮ್ಮೊಳಗಿನ ದೋಷಗಳನ್ನು ಇತರರ ಮೇಲೆ ಆರೋಪಿಸುವುದಾಗಿರುತ್ತದೆ. ಆದ್ದರಿಂದಲೇ ಪ್ರಸಿದ್ಧ ಮನಶ್ಶಾಸ್ತ್ರಜ್ಞ ಕೆನ್ ವಿಲ್ಬರ್ ಹೇಳುತ್ತಾನೆ : 'ಒಬ್ಬ ವ್ಯಕ್ತಿಯ ನಿಜವಾದ ಸ್ವರೂಪವನ್ನು ನೀವು ತಿಳಿಯಬೇಕಾದರೆ ಅವನು ಇತರರ ಬಗ್ಗೆ ಏನು ಹೇಳುತ್ತಾನೆ ಎಂಬುದನ್ನು ಕೇಳಿ.' (*Spectrum of Consciousness* ಪುಟ. ೨೦೩)

## ಕರ್ಮವಿಶ್ಲೇಷಣೆ

ನಾವು ಮಾಡುವ ಕೆಲಸಗಳನ್ನು ವಿಶ್ಲೇಷಿಸಿ ನೋಡಿ, ಅವುಗಳಲ್ಲಿ ಎಷ್ಟು ಅವಶ್ಯಕ, ಎಷ್ಟು ಅನವಶ್ಯಕ; ಎಷ್ಟು **ಕರ್ತವ್ಯ** ಹಾಗೂ ಎಷ್ಟು **ಕಾಮ್ಯ**; ಎಷ್ಟು **ಯೋಗ್ಯ** ಎಷ್ಟು **ನಿಷಿದ್ಧ**; ಎಷ್ಟು **ಸ್ವಾರ್ಥಪರ**, ಎಷ್ಟು **ಪರಾರ್ಥಪರ**; ಮತ್ತು ಎಷ್ಟು ತನ್ನ ಪಾಲಿನದು, ಎಷ್ಟು ಇತರರದು ಎಂಬುದನ್ನು ಅರಿತುಕೊಳ್ಳಬೇಕು. ಅನೇಕವೇಳೆ ನಮ್ಮ ವ್ಯಾಮೋಹಗಳೇ ಕರ್ತವ್ಯರೂಪದಲ್ಲಿ ಕಾಣಿಸಿಕೊಳ್ಳುತ್ತವೆ. 'ಕರ್ತವ್ಯಗಳು ನಾವು ನಮ್ಮ ವ್ಯಾಮೋಹಕ್ಕಾಗಿ ತೆರುವ ದಂಡ'ಎಂದು ಓರ್ವ ಚಿಂತಕನು ಹೇಳುತ್ತಾನೆ. ಕೆಲವು ವ್ಯಕ್ತಿಗಳ ಮೇಲಿರುವ ನಮ್ಮ ವ್ಯಾಮೋಹ ಅಥವಾ ಆಕರ್ಷಣೆ ಅವರೊಡನೆ ಮಾತನಾಡುವುದು ಧಾರ್ಮಿಕ ಕರ್ತವ್ಯವಾಗಿ ಪರಿಣಮಿಸುತ್ತದೆ. ಕೀರ್ತಿಯ ಮೇಲಿನ ನಮ್ಮ ಆಸೆ ಉಪನ್ಯಾಸವನ್ನು ಕರ್ತವ್ಯವನ್ನಾಗಿಸುತ್ತದೆ. ಹೀಗೆ ನಮ್ಮ **ಕರ್ಮವಿಶ್ಲೇಷಣೆ** ನಮ್ಮ ಎಷ್ಟೋ ಲೋಪದೋಷಗಳನ್ನು ವ್ಯಕ್ತಪಡಿಸುತ್ತದೆ. ನಮ್ಮ ಸುತ್ತಲ ವಾತಾವರಣದಲ್ಲಿ, ವಸ್ತುಗಳಲ್ಲಿ, ಹಾಗೂ ದೇಹದಲ್ಲಿ ಅಸಂಖ್ಯ ಸೂಕ್ಷ್ಮ ಕ್ರಿಮಿಗಳು ಇರುತ್ತವೆ. ಇವು ಬರಿಗಣ್ಣಿಗೆ ಕಾಣಿಸುವುದಿಲ್ಲ. ಆದರೆ ಸೂಕ್ಷ್ಮ ದರ್ಶಕದ ಮೂಲಕ ನೋಡಬಹುದು. ಹಾಗೆಯೇ ವಿವೇಕವೆಂಬ ಸೂಕ್ಷ್ಮ ದರ್ಶಕದ ಮೂಲಕ ನಮ್ಮ ಕರ್ಮಗಳ ಹಿಂದಿರುವ ಸೂಕ್ಷ್ಮ ಆಸೆಗಳನ್ನು ಅರಿಯಬಹುದು. ಈ ಅರಿವಿನಿಂದ ನಮ್ಮ ಆಸೆಗಳನ್ನು ನಿಗ್ರಹಿಸಿದ ಮೇಲೆ ಮನಸ್ಸು ಪರಿಶುದ್ಧವಾಗಿ ಧ್ಯಾನಯೋಗ್ಯವಾಗುತ್ತದೆ.

## ವಿಷಯವಿಷಯೀ ವಿವೇಕ

ನಾವು ಧ್ಯಾನದ ಸಮಯದಲ್ಲಿ ಚಿತ್ತವೃತ್ತಿಗಳನ್ನು ನಿಗ್ರಹಿಸುತ್ತೇವೆ. ಹೀಗೆ ನಿಗ್ರಹಿಸಬೇಕಾದರೆ ನಮ್ಮನ್ನು ಚಿತ್ತವೃತ್ತಿಗಳಿಂದ ಪ್ರತ್ಯೇಕಿಸಿಕೊಳ್ಳಬೇಕಾಗುತ್ತದೆ—ವಿಷಯಿಯನ್ನು ವಿಷಯದಿಂದ ಪ್ರತ್ಯೇಕಿಸಬೇಕಾಗುತ್ತದೆ. ಇಲ್ಲಿ **ವಿಷಯವೇ ಚಿತ್ತವೃತ್ತಿಗಳು**, ಅವುಗಳನ್ನು ಸಾಕ್ಷಿಯಂತೆ ನೋಡುವವನು **ವಿಷಯಿ**. ಈ ವಿಷಯ-ವಿಷಯಿ ವಿವೇಕವಿಲ್ಲದಿದ್ದರೆ ಚಿತ್ತವೃತ್ತಿಗಳನ್ನು ನಿಗ್ರಹಿಸುವುದು ಸಾಧ್ಯವಾಗುವುದಿಲ್ಲ. ನಾವು ವೃತ್ತಿಗಳೊಂದಿಗೆ ಒಂದಾಗುವುದರಿಂದಲೇ ಅವುಗಳು ನಮ್ಮ ಹತೋಟಿ ಮೀರಿ ವರ್ತಿಸುತ್ತವೆ. ವೃತ್ತಿಗಳನ್ನು ಪ್ರತ್ಯೇಕವಾಗಿ ನೋಡಲು ನಮಗೆ ಸಾಧ್ಯವಾದಾಗ ವೃತ್ತಿಗಳು ಕಣ್ಮರೆಯಾಗುತ್ತ ಬರುತ್ತವೆ ಮತ್ತು ಅವುಗಳ ಕ್ಷಣಿಕತೆ ಅಥವಾ ಅನಿತ್ಯತೆಯೂ ಸಾಕ್ಷಿಯಾಗಿ ನೋಡುವ ವಿಷಯಿಯ ನಿತ್ಯತೆಯೂ ನಮ್ಮ ಅರಿವಿಗೆ ಬರುತ್ತದೆ. ಇದೇ ನಿಜವಾದ ನಿತ್ಯಾನಿತ್ಯ ವಸ್ತು ವಿವೇಕ. ಇದೊಂದು ಆಲೋಚನಾಪ್ರಕ್ರಿಯೆ (discursive thinking) ಅಲ್ಲ. ಇದು ಕೇವಲ ಅರಿವು. ಈ ಅರಿವು ಪರಿಪಕ್ವವಾದಾಗ ಆತ್ಮಸ್ವರೂಪದ ಜ್ಞಾನವುಂಟಾಗುತ್ತದೆ (**ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಮ್**— 'ಆಗ ಆತ್ಮನು ತನ್ನ ಸ್ವರೂಪದಲ್ಲಿ ನೆಲೆನಿಲ್ಲುತ್ತಾನೆ'—ಯೋಗ ಸೂತ್ರ ೧-೩).

ಇದು ವಿಶ್ಲೇಷಣಾತ್ಮಕ 'ನೇತಿ ನೇತಿ' ಮಾರ್ಗ. ಇದರ ಮೂಲಕ ಆತ್ಮಸಾಕ್ಷಾತ್ಕಾರವನ್ನು ಪಡೆದಮೇಲೆ, ವ್ಯಕ್ತಿಭಾವವನ್ನು ಉಂಟುಮಾಡುವ ಎಲ್ಲ ಉಪಾಧಿಗಳೂ ಹೊರಟುಹೋದಮೇಲೆ, ಎಲ್ಲವೂ ಆತ್ಮಮಯವಾಗಿ ಕಾಣುತ್ತದೆ (**ಈಶಾವಾಸ್ಯಮಿದಂ ಸರ್ವಂ; ಸರ್ವಂ ಖಲ್ವಿದಂ ಬ್ರಹ್ಮ** ಇತ್ಯಾದಿ). ಇದು **ಸಮುಚ್ಚಯ ಭಾವ**. ವಿಶ್ಲೇಷಣೆಯ ಮೂಲಕ ನಾವು ಮುಂದುವರಿದು ಸಮುಚ್ಚಯಾತ್ಮಕ ಅನುಭವದಲ್ಲಿ ನಮ್ಮ ಆಧ್ಯಾತ್ಮಿಕ ಯಾತ್ರೆ ಕೊನೆಗೊಳ್ಳುತ್ತದೆ. ಶ್ರೀರಾಮಕೃಷ್ಣರು

> 'ಒಬ್ಬ ವ್ಯಕ್ತಿಯ ನಿಜವಾದ ಸ್ವರೂಪವನ್ನು ನೀವು ತಿಳಿಯಬೇಕಾದರೆ ಅವನು ಇತರರ ಬಗ್ಗೆ ಏನು ಹೇಳುತ್ತಾನೆ ಎಂಬುದನ್ನು ಕೇಳಿ.'

ಮೊದಲನೆಯದನ್ನು ಜ್ಞಾನವೆಂದೂ ಎರಡನೆಯದನ್ನು ವಿಜ್ಞಾನವೆಂದೂ ಕರೆಯುತ್ತಿದ್ದರು. ಅವರು ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಿದ್ದರು. ಮಹಡಿಗೆ ಏರುವಾಗ ಒಂದೊಂದೇ ಮೆಟ್ಟಲನ್ನು ಕೆಳಗೆಬಿಟ್ಟು (ನೇತಿ ನೇತಿ) ಮಹಡಿಗೆ ಹೋಗುತ್ತೇವೆ. ಅದನ್ನು ಏರಿದ ಮೇಲೆ, ಮಹಡಿಯು ಹೇಗೆ ಕಲ್ಲು ಸಿಮೆಂಟು ಕಬ್ಬಿಣಗಳಿಂದ ಆಗಿದೆಯೋ ಅದೇ ವಸ್ತುಗಳಿಂದಲೇ ಮೆಟ್ಟಲುಗಳೂ ಮಾಡಲ್ಪಟ್ಟಿವೆ ಎಂಬುದು ಅರಿವಾಗುತ್ತದೆ. ಹಾಗೆಯೇ 'ನೇತಿ ನೇತಿ' ಮಾರ್ಗದ ಮೂಲಕ ಬ್ರಹ್ಮ ಸಾಕ್ಷಾತ್ಕಾರವಾದ ಮೇಲೆ ಎಲ್ಲವೂ ಬ್ರಹ್ಮವೇ ಎಂದು ಅರಿವಾಗುತ್ತದೆ.

ಹೀಗೆ ಹಂತಹಂತವಾಗಿ ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯಲು 'ವಿವೇಕಪ್ರಭೆ'ಯು ತನ್ನ ಬೆಳಕನ್ನು ಚೆಲ್ಲಿ, ಆಧ್ಯಾತ್ಮಿಕವಾಗಿ ಸಮೃದ್ಧ ಜೀವನವನ್ನು ನಡೆಸಲು ಸಹಾಯಕವಾಗಲೆಂದು ಹಾರೈಸುತ್ತೇವೆ.